**ಸಾಕ್ಷಿಯನ್ನು ದಿಃ 22.05.2023 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ.ಜೆ.ಪಿ ವಕೀಲರಿಂದ**

ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳಲ್ಲಿ ನನ್ನ ತಂದೆ ತಿಮ್ಮರಾಯಪ್ಪ ಮತ್ತು ತಾತ ಚಿನ್ನರಾಮಪ್ಪ ರವರುಗಳ ಹೆಸರು ನಮೂದು ಆಗಿಲ್ಲ ಎಂದರೆ ಸರಿ. ಚಿಕ್ಕತಿಮ್ಮರಾಯಪ್ಪ ಎಂದು ನಮೂದು ಆಗಿರುತ್ತದೆ. ದಾವಾಸರ್ವೆ ನಂ. 43/3, ವಿಸ್ತೀರ್ಣ 19 ಗುಂಟೆ ಜಮೀನು ಪ್ರತಿವಾದಿ 3 ರಿಂದ 6 ರವರ ಕುಟುಂಬಕ್ಕೆ ಸೇರಿದ ಜಮೀನು ಎಂದರೆ ಸರಿಯಲ್ಲ. ಪ್ರತಿವಾದಿ 5 ರವರ ತಂದೆಯ ಹೆಸರು ಚಿಕ್ಕತಿಮ್ಮರಾಯಪ್ಪ ಎಂದರೆ ಸರಿಯಲ್ಲ. ಸಾಕ್ಷಿ ಮುಂದು ವರೆದು 5 ನೇ ಪ್ರತಿವಾದಿಯ ತಂದೆಯ ಹೆಸರು ತಿಮ್ಮರಾಯಪ್ಪ ಎಂದು ಉತ್ತರಿಸುತ್ತಾರೆ. 5 ನೇ ಪ್ರತಿವಾದಿಯ ತಂದೆಯ ಹೆಸರನ್ನು ವಾದಪತ್ರದಲ್ಲಿ ದುರುದ್ದೇಶದಿಂದ ನಡುಪಣ್ಣ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ 5 ನೇ ಪ್ರತಿವಾದಿಯ ತಂದೆಯ ಹೆಸರು ನಡುಪಣ್ಣ ಎಂದು ನನ್ನ ವಕೀಲರಿಗೆ ಮಾಹಿತಿ ಕೊಟ್ಟಿಲ್ಲ.

6 ನೇ ಪ್ರತಿವಾದಿಯ ತಂದೆಯ ಹೆಸರು ತಿಮ್ಮರಾಯಪ್ಪ ಆಗಿರುತ್ತದೆ. 6 ನೇ ಪ್ರತಿವದಿಯ ತಂದೆಯ ಹೆಸರನ್ನೂ ಸಹಾ ನಾನು ವಾದಪತ್ರದಲ್ಲಿ ನಡುಪಣ್ಣ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ 5 ಮತ್ತು 6 ರವರು ಚಿಕ್ಕ ವರದಪ್ಪರವರ ಮೊಮ್ಮಕಳು ಮತ್ತು ಚಿಕ್ಕ ತಿಮ್ಮರಾಯಪ್ಪರವರ ಮಕ್ಕಳು ಎಂದರೆ ಸರಿಯಲ್ಲ. ದಾವಾ ಐಟಂ 2 ರ ಸ್ವತ್ತು ಪ್ರತಿವಾದಿ 3 ರಿಂದ 6 ರವರ ಕುಟುಂಬಕ್ಕೆ ಸೇರಿದ ಸ್ವತ್ತಾಗಿದ್ದು ಸದರಿ ಸ್ವತ್ತಿನ ಪಹಣಿಯಲ್ಲಿ ಚಿಕ್ಕತಿಮ್ಮರಾಯಪ್ಪ ಎಂದು ನಮೂದು ಆಗಿದ್ದು ಅದು ನನ್ನ ತಂದೆಯ ಹೆಸರಿಗೆ ಹೊಂದಾಣಿಕೆ ಆಗುವುದರಿಂದ ಅದನ್ನು ದುರುಪಯೋಗ ಮಾಡಿಕೊಂಡು ಸದರಿ ಸ್ವತ್ತನ್ನು ಕ್ಲೇಮು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಹಣಿ ಪತ್ರಿಕೆಯಲ್ಲಿ ನಮೂದು ಆಗಿರುವ ಹೆಸರು ಪ್ರತಿವಾದಿ 5 ಮತ್ತು 6 ರವರ ತಂದೆಯದ್ದಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ 5 ಮತ್ತು 6 ರವರ ತಂದೆ ಮೃತ ಪಟ್ಟ ನಂತರ

ಪ್ರತಿವಾದಿಗಳು ಮತ್ತು ಅವರ ಕುಟುಂಬದವರು ದಾವಾ ಐಟಂ 2 ರ ಸ್ವತ್ತನ್ನು ಸೇರಿಸಿ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಿಭಾಗದ ಪ್ರಕಾರ ಖಾತೆ ಸಹಾ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ದಾವಾಐಟಂ 2 ರ ಸ್ವತ್ತಿನಲ್ಲಿ ಪ್ರತಿವಾದಿ 3 ರವರಿಗೆ 6 ಕಾಲು ಗುಂಟೆ, ಪ್ರತಿವಾದಿ 4 ರವರಿಗೆ 4 ಕಾಲು ಗುಂಟೆ, ಪ್ರತಿವಾದಿ 5 ರವರಿಗೆ 4 ಕಾಲು ಗುಂಟೆ, ಪ್ರತಿವಾದಿ 6 ರವರಿಗೆ 4 ಕಾಲು ಗುಂಟೆ ಬಂದಿರುತ್ತದೆ ಎಂದರೆ ಸರಿಯಲ್ಲ. ಇದರಂತೆ ಸದರಿ ಪ್ರತಿವಾದಿಗಳ ಹೆಸರು ಪಹಣಿ ಪತ್ರಿಕೆಗಳಲ್ಲಿ ನಮೂದಾಗಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 4 ರವರಿಗೆ ಬಂದ 4 ಕಾಲು ಗುಂಟೆ ಜಮೀನನ್ನು ಅವರ ಮಕ್ಕಳು ಹಂಚಿಕೆ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ 2 ರ ಸ್ವತ್ತು ಪ್ರತಿವಾದಿ 3 ರಿಂದ 6 ರವರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ದಾವಾ ಐಟಂ 2 ರ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಅದನ್ನು ಅಕ್ರಮವಾಗಿ ಕಬಳಿಸಲು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಐಟಂ 2 ರ ಸ್ವತ್ತು ಪ್ರತಿವಾದಿ 5 ಮತ್ತು 6 ರವರ ತಂದೆ ಚಿಕ್ಕ ತಿಮ್ಮರಾಯಪ್ಪರವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಚಿಕ್ಕತಿಮ್ಮರಾಯಪ್ಪ ಬಿನ್ ಚೆನ್ನರಾಮಪ್ಪ ಎಂದು ಯಾವುದೇ ಪಹಣಿ ಪತ್ರಿಕೆಗಳಲ್ಲಿ ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ 2 ರ ಸ್ವತ್ತು ಚಿಕ್ಕತಿಮ್ಮರಾಯಪ್ಪ ಬಿನ್ ಚೆನ್ನರಾಮಪ್ಪ ರವರಿಗೆ ಸೇರಿತ್ತು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ 2 ರ ಸ್ವತ್ತು ಪ್ರತಿವಾದಿ 3 ರಿಂದ 6 ರವರ ಕುಟುಂಬಕ್ಕೆ ಸೇರಿದ ಸ್ವತ್ತು ಎಂದು ತೋರಿಸಲು ಟಿಪ್ಪಣಿ, ಆಕಾರ್ ಬಂದ್ ಮತ್ತು ಇತರೆ ದಾಖಲಾತಿಗಳಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕೇಶವಮೂರ್ತಿ.ಬಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ**